IV

Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

(EXTRAORDINARY)
ವಿಶೇಷ ಸಂಚಿಕೆ

भाग–IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं–1<br>No. 1<br>ಸಂಖ್ಯೆ ೧ | नई दिल्ली सोमवार, नोव्हेंबर 10, 1986<br>New Delhi Monday, November 10, 1986<br>ನವದೆಹಲಿ ಸೋಮವಾರ, ನವೆಂಬರ್ ೧೦, ೧೯೮೬ | कार्तिक 19, 1908 (शक)<br>Karthika 19, 1908 (Saka)<br>ಕಾರ್ತೀಕ ೧೯, ೧೯೦೮ (ಶಕ) | खण्ड–4<br>Vol. 4<br>ಸಂಪುಟ ೪ |


## MINISTRY OF LAW AND JUSTICE
### (Legislative Department)

New Delhi, September 8, 1986/Bhadrapada 17, 1908 (Sakha)

The translations in Kannada of the following namely — (1) The Public Servants (Inquiries) Act, 1850 (2) The Caste Disabilities Removal Act, 1850 (3) The Dramatic Performances Act, 1876 (4) The Epidemic Diseases Act, 1897 (5) The Police (Incitement to Disaffection) Act, 1922 (6) The Hindu Inheritance (Removal of Disabilities) Act, 1928 (7) The Hindu Gains of Learning Act, 1930 (8) The Arya Marriage Validation Act, 1937 (9) The Employees Liability Act, 1938 (10) The Weekly Holidays Act, 1942 (11) The Foreigners Act, 1946 (12) The Representation of the People (Miscellaneous Provisions) Act, 1956 (13) The Standards of Weights and Measures Act, 1976 (14) The National Library of India Act, 1976–are hereby published under the authority of the President and shall be deemed to be the authorised translations thereof in Kannada under clause (a) of Section 2 of the authorised Translations (Central Laws) Act, 1973 (50 of 1973).

ಕೆಳಕಂಡ ಅಧಿನಿಯಮಗಳು ಎಂದರೆ (೧) ಲೋಕ ನೌಕರರ (ವಿಚಾರಣಾ) ಅಧಿನಿಯಮ, ೧೮೫೦ (೨) ಜಾತಿ ಅಸಮರ್ಥತೆಗಳನ್ನು ತೆಗೆದುಹಾಕುವ ಅಧಿನಿಯಮ, ೧೮೫೦ (೩) ನಾಟಕ ಪ್ರದರ್ಶನ ಅಧಿನಿಯಮ, ೧೮೭೬ (೪) ಸಾಂಕ್ರಾಮಿಕ ರೋಗಗಳ ಅಧಿನಿಯಮ, ೧೮೯೭ (೫) ಪೊಲೀಸು (ಅಪ್ರೀತಿ ಪ್ರಚೋದನಾ) ಅಧಿನಿಯಮ, ೧೯೨೨ (೬) ಹಿಂದೂ ವಾರಸು (ಅಸಮರ್ಥತಾ ನಿವಾರಣಾ) ಅಧಿನಿಯಮ, ೧೯೨೮ (೭) ಹಿಂದೂ ವಿದ್ಯಾರ್ಧನ ಅಧಿನಿಯಮ, ೧೯೩೦ (೮) ಆರ್ಯ ವಿವಾಹ ಮಾನ್ಯೀಕರಣ ಅಧಿನಿಯಮ, ೧೯೩೭ (೯) ನಿಯೋಜಕ ಹೊಣೆಗಾರಿಕೆ ಅಧಿನಿಯಮ, ೧೯೩೮ (೧೦) ವಾರದ ರಜಾ ದಿನ ಅಧಿನಿಯಮ, ೧೯೪೨ (೧೧) ವಿದೇಶಿಯರ ಅಧಿನಿಯಮ, ೧೯೪೬ (೧೨) ಜನತಾ ಪ್ರಾತಿನಿಧ್ಯ (ಸಂಕೀರ್ಣ ಉಪಬಂಧಗಳ) ಅಧಿನಿಯಮ, ೧೯೫೬ (೧೩) ತೂಕ ಮತ್ತು ಅಳತೆ ಮಾನಕ ಅಧಿನಿಯಮ, ೧೯೭೬, (೧೪) ಭಾರತ ರಾಷ್ಟ್ರೀಯ ಗ್ರಂಥಾಲಯ ಅಧಿನಿಯಮ, ೧೯೭೬.

ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ, (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

## ಹಿಂದೂ ವಾರಸು (ಅಸಮರ್ಥತಾ ನಿವಾರಣೆ) ಅಧಿನಿಯಮ, 1928

(1928ರ 12)

[ಸೆಪ್ಟೆಂಬರ್ 20, 1928]

[ಮೇ 1, 1984 ರಂದು ಜಾರಿಯಲ್ಲಿದ್ದಂತೆ]

ಕೆಲವು ವರ್ಗಗಳ ವಾರಸುದಾರರನ್ನು ವಾರಸ್ಸಿನಿಂದ ಹೊರತುಪಡಿಸುವುದಕ್ಕೆ ಸಂಬಂಧಿಸಿದ ಹಿಂದೂ ಕಾನೂನನ್ನು ತಿದ್ದುಪಡಿ ಮಾಡುವ, ಮತ್ತು ಕೆಲವು ಸಂದೇಹಗಳನ್ನು ನಿವಾರಿಸುವ ಅಧಿನಿಯಮ.

ಕೆಲವು ವರ್ಗಗಳ ವಾರಸುದಾರರನ್ನು ವಾರಸಿನಿಂದ ಹೊರತುಪಡಿಸುವುದಕ್ಕೆ ಸಂಬಂಧಿಸಿದ ಹಿಂದೂ ಕಾನೂನನ್ನು ತಿದ್ದುಪಡಿ ಮಾಡುವುದು, ಮತ್ತು ಕೆಲವು ಸಂದೇಹಗಳನ್ನು ನಿವಾರಿಸುವುದು ವಿಹಿತವಾಗಿರುವುದರಿಂದ, ಅದನ್ನು ಈ ಮೂಲಕ ಕೆಳಕಂಡಂತೆ ಅಧಿನಿಯಮಿಸಲಾಗಿದೆ:—

1. ಸಂಕ್ಷಿಪ್ತ ಹೆಸರು ವ್ಯಾಪ್ತಿ ಹಾಗೂ ಅನ್ವಯ:—(1) ಈ ಅಧಿನಿಯಮವನ್ನು ಹಿಂದೂ ವಾರಸು (ಅಸಮರ್ಥತಾ ನಿವಾರಣೆ) ಅಧಿನಿಯಮ, 1928 ಎಂದು ಕರೆಯತಕ್ಕದ್ದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು ಹಿಂದೂ ಕಾನೂನಿನ ದಾಯಭಾಗ ಪದ್ಧತಿಗೆ ಒಳಪಟ್ಟಿರುವ ಯಾವನೇ ವ್ಯಕ್ತಿಗೆ ಅನ್ವಯವಾಗತಕ್ಕದ್ದಲ್ಲ.+

2. ಜಂಟಿ ಕುಟುಂಬದ ಸ್ವತ್ತಿಗೆ ಸಂಬಂಧಿಸಿದ ವಾರಸ್ಸಿನಿಂದ ಅಥವಾ ಅದರಲ್ಲಿನ ಹಕ್ಕುಗಳಿಂದ ವ್ಯಕ್ತಿಗಳನ್ನು ಹೊರತುಪಡಿಸತಕ್ಕದ್ದಲ್ಲ:— ತದ್ವಿರುದ್ಧವಾಗಿ ಹಿಂದೂ ಕಾನೂನಿನ ಯಾವುದೇ ನಿಯಮವು ಅಥವಾ ರೂಢಿಯು ಇದ್ದರೂ, ಹುಟ್ಟಿನಿಂದ ಮನೋವಿಕಲನಾಗಿರುವ ಅಥವಾ ದಡ್ಡನಾಗಿರುವ ಮತ್ತು ಆಗಿದ್ದ ವ್ಯಕ್ತಿಯನ್ನು ಹೊರತುಪಡಿಸಿ, ಹಿಂದೂ ಕಾನೂನಿಗೆ ಒಳಪಟ್ಟಿರುವ ಇತರ ಯಾವ ವ್ಯಕ್ತಿಯನ್ನೂ, ಯಾವುದೇ ರೋಗದ, ಅಂಗವಿಕಲತೆಯ, ಅಥವಾ ದೈಹಿಕ ಅಥವಾ ಮಾನಸಿಕ ನ್ಯೂನತೆಯ ಕಾರಣ ಮಾತ್ರದಿಂದ ಜಂಟಿ ಕುಟುಂಬದ ಸ್ವತ್ತಿನಲ್ಲಿನ ಯಾವುದೇ ಹಕ್ಕಿನಿಂದ ಅಥವಾ ಹಿಸ್ಸೆಯಿಂದ ಹೊರತುಪಡಿಸತಕ್ಕದ್ದಲ್ಲ.

3. ಉಳಿಸುವಿಕೆ ಹಾಗೂ ಅಪವಾದ:— ಈ ಅಧಿನಿಯಮದಲ್ಲಿರುವುದು ಯಾವುದೂ, ಇದರ ಪ್ರಾರಂಭಕ್ಕೆ ಮುಂಚೆ ಪ್ರಾಪ್ತವಾದ ಯಾವುದೇ ಹಕ್ಕನ್ನು ಅಥವಾ ಒದಗಿಬಂದಿರುವ ಯಾವುದೇ ಹೊಣೆಯನ್ನು ಬಾಧಿಸತಕ್ಕದ್ದಲ್ಲ, ಅಥವಾ ಯಾವುದೇ ಧಾರ್ಮಿಕ ಪದಕ್ಕೆ ಅಥವಾ ಸೇವೆಗೆ ಅಥವಾ ಯಾವುದೇ ಧಾರ್ಮಿಕ ಅಥವಾ ಧರ್ಮಾರ್ಥ ನ್ಯಾಸದ ವ್ಯವಸ್ಥಾಪನೆಗೆ ಸಂಬಂಧಿಸಿದ ಯಾವ ಹಕ್ಕನ್ನು ಈ ಅಧಿನಿಯಮವು ಅನುಮೋದಿತವಾಗಿರದಿದ್ದರೆ ಅವನು ಹೊಂದುತ್ತಿರಲಿಲ್ಲವೋ ಆ ಯಾವುದೇ ಹಕ್ಕನ್ನು ಆ ಯಾವನೇ ವ್ಯಕ್ತಿಗೆ ಪ್ರಧಾನ ಮಾಡುವುದೆಂದು ಭಾವಿಸತಕ್ಕದ್ದಲ್ಲ.

---

* ಇದನ್ನು ಪಾಂಡಿಚೇರಿಗೆ ಅನ್ವಯಿಸುವಾಗ 1ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಕೆಳಗಿನವುಗಳನ್ನು ಕೊನೆಯಲ್ಲಿ ಸೇರಿಸತಕ್ಕದ್ದು.
"ಅಥವಾ ಪಾಂಡಿಚೇರಿಯ ಸಂಘ ರಾಜ್ಯಕ್ಷೇತ್ರದ ರಿನೋಕ್ಯಾಂಟರಿಗೆ ಅನ್ವಯವಾಗತಕ್ಕದ್ದಲ್ಲ."

The above translation in Kannada of The Hindu Inheritance (Renoval of Disabilities) Act, 1928 (Act No. 12 of 1928) has been authorised by the President to be published in the Official Gazette under clause (a) of section of the Authorised Translations (Cenral Laws) Act, 1974.

*Secretary to the Government of India.*